ಹೋಟೆಲ್‌ನಲ್ಲಿ ಸಭೆಯನ್ನು ಕರೆದಿದ್ದಾರೆ. ಮುಖ್ಯಮಂತ್ರಿಗಳೂ ರಾಜೀನಾಮೆ ಕೊಡಬೇಕಾಗುತ್ತದೆ. ಇವರುಗಳೂ ರಾಜೀನಾಮೆ ಕೊಡಬೇಕಾಗುತ್ತದೆ. ಚರ್ಚೆಯಲ್ಲಿ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಮಂಡಿಸುತ್ತೇವೆ. ಅದಕ್ಕೆ ತಾವು ಅವಕಾಶ ಕೊಡಬೇಕು. ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ಗಂಭೀರವಾಗಿ ಕುಳಿತುಕೊಳ್ಳಲು ತಾವು ಮನವಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

2. ಪ್ರಶ್ನೋತ್ತರ:

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ನಿಗಮ–ಬ್ಯಾಂಕ್ ಲಿಂಕ್ ಸಾಲ ಯೋಜನೆಯಲ್ಲಿ ಪ್ರಗತಿ ಕುಂಠಿತವಾಗಿರುವುದು

46(144) ಶ್ರೀ ಮಂಜುನಾಥ ಹೆಚ್ ಪಿ:(ಹುಣಸೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸ್ವಾಮ್ಯತೆಯ ನಿಗಮಗಳಾದ ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಮೈಸೂರು ಜಿಲ್ಲೆಗೆ ತಾಲ್ಲೂಕುವಾರು ವಿವಿಧ ಸಾಲ ಸೌಲಭ್ಯಗಳಡಿ (ಸ್ವಯಂ ಉದ್ಯೋಗ, ಐ.ಎಸ್.ಬಿ. ಯೋಜನೆ ಇತ್ಯಾದಿ) ನಿಗದಿಪಡಿಸಿದ ಗುರಿ ಎಷ್ಟು ಹಾಗೂ ಸಾಧಿಸಿದ ಪ್ರಗತಿಯ ಪೂರ್ಣ ವಿವರ ನೀಡುವುದು:

ಆ) 2009–10ನೇ ಸಾಲಿನ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ವಿವಿಧ ಸಾಲ ಯೋಜನೆಯಡಿಯಲ್ಲಿ ಸಹಾಯಧನ ಮಂಜೂರು ಆಗಿಲ್ಲದಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣಗಳೇನು;

ಇ) ಮೇಲ್ಕಂಡ ನಿಗಮಗಳ ವಿವಿಧ ಯೋಜನೆಗಳಡಿ ಬ್ಯಾಂಕ್ ಲಿಂಕ್ ಆಗಿರುವಂತ ಸಾಲಗಳನ್ನು ಆಯ್ಕೆಗೊಂಡಂತಹ ಫಲಾನುಭವಿಗಳಿಗೆ ಬ್ಯಾಂಕ್

ವತಿಯಿಂದ ಸಾಲ ಮಂಜೂರಾತಿ ನೀಡದೇ ಕಡೆಗಣಿಸಿ ಫಲಾನುಭವಿಗಳನ್ನು ಅಲೆದಾಡಿಸುತ್ತಿರುವುದು ಹಾಗೂ ಪ್ರಗತಿ ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬ್ಯಾಂಕ್ ಲಿಂಕ್ ಯೋಜನೆಗಳಲ್ಲಿ ಪ್ರಗತಿ ಕುಂಠಿತವಾಗಿದೆ.

ಉ) ಹಾಗಿದ್ದಲ್ಲಿ, ಬ್ಯಾಂಕ್‌ಗಳ ಮೇಲೆ ಹಿಡಿತ ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ ಸುಧಾಕರ(ಸಮಾಜ ಕಲ್ಯಾಣ ಸಚಿವರು):

1. ಅ) ಡಿ.ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ–ತಾಲ್ಲೂಕುವಾರು ನಿಗಧಿಪಡಿಸಿದ ಗುರಿ ಮತ್ತು ಸಾಧಿಸಿದ ಪ್ರಗತಿಯ ವಿವರ ಅನುಬಂಧ–1ರಲ್ಲಿ ಹಾಗೂ ತಾಲ್ಲೂಕುವಾರು ಅನುಬಂಧ–2ರಲ್ಲಿ ನೀಡಿದೆ.

2. ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ – ಅನುಬಂಧ–3ರಲ್ಲಿ ನೀಡಿದೆ

3. ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ – ಅನುಬಂಧ–4ರಲ್ಲಿ ನೀಡಿದೆ

ಆ) ಹೌದು. ಆಯವ್ಯಯದ ಅನುದಾನ ಲಭ್ಯತೆ ಅನುಗುಣವಾಗಿ ಕ್ರಮ ಕೈಗೊಳ್ಳಲಾಗುವುದು.

ಇ) ರಾಜ್ಯಮಟ್ಟದ ಬ್ಯಾಂಕರ್ಸ್‌ಗಳ ಸಮಿತಿ ಸಭೆಗಳ ಮುಂದೆ ತಂದು ಗುರಿಯಂತೆ ಸಾಲ ಮಂಜೂರು

ಈ) ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ).

ಬೆಂಗಳೂರು

ಅನುಬಂಧ – 1

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ತಾಲ್ಲೂಕು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ

1	ಹುಣಸೂರು	636	46.83	150	20.03
2	ಪಿರಿಯಾಪಟ್ಟಣ	626	46.23	128	15.59
3	ಕೃಷ್ಣರಾಜನಗರ	624	45.73	70	10.16
4	ಹೆಚ್.ಡಿ.ಕೋಟೆ	644	47.74	191	24.07
5	ನಂಜನಗೂಡು	621	44.03	338	45.06
6	ಟಿ.ನರಸೀಪುರ	636	47.28	298	33.47
7	ಮೈಸೂರು	3019	208.85	1095	144.81
ಒಟ್ಟು		**6806**	**486.69**	**2272**	**293.19**

ಅನುಬಂಧ–2

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ (ನಿ).

ಬೆಂಗಳೂರು

2009–10ನೇ ಸಾಲಿನ ನಿಗಮದ ಸಾಲ ಯೋಜನೆಗಳ ತಾಲ್ಲೂಕುವಾರು ಗುರಿ ಮತ್ತು ಸಾಧನೆ

ದಿನಾಂಕ: 01/04/09 ರಿಂದ 31/03/10 ರವರೆಗೆ

ಜಿಲ್ಲೆ: ಮೈಸೂರು **ಪಿರಿಯಾಪಟ್ಟಣ ತಾಲ್ಲೂಕು**

ಕ್ರ ಸಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	22	2.42	2	0.50
2	ಸಾಂಪ್ರದಾಯಕ ವೃತ್ತಿದಾರರ ಯೋಜನೆ	446	22.30	–	–
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	1	0.1

4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	22	3.30	20	3.00
5	ಶ್ರಮಶಕ್ತಿ ಯೋಜನೆ	14	2.80	15	2.25
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	–	–
7	ಕಿರುಸಾಲ ಯೋಜನೆ	44	2.20	36	1.80
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	8	1.70	–	–
10	ದೇವಾಂಗ	2	0.20	–	–
11	ಮಡಿವಾಳ	8	1.15	–	–
12	ಕುಂಬಾರ	3	0.90	–	–
13	ಕುಂಬಾರ	4	1.00	–	–
14	ಕ್ಷತ್ರಿಯ	2	0.50	–	–
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	–	–
ಒಟ್ಟು		**575**	**38.47**	**74**	**7.65**

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ					
16	1) ಅವಧಿ ಸಾಲಗಳು	11	2.97	22	3.14
	2) ನ್ಯೂ-ಸ್ವರ್ಣಿಮಾ ಯೋಜನೆ	40	4.79	32	4.80
ಒಟ್ಟು		51	7.76	54	7.94

0-242-4

ಒಟ್ಟು ಮೊತ್ತ	626	46.23	128	15.59

ಜಿಲ್ಲೆ: ಮೈಸೂರು ಕೃಷ್ಣರಾಜನಗರ ತಾಲ್ಲೂಕು

ಕ್ರ ಸಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	22	2.42	11	1.51
2	ಸಾಂಪ್ರದಾಯಕ ವೃತ್ತಿದಾರರ ಯೋಜನೆ	446	22.30	–	–
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	–	–
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	22	3.30	–	–
5	ಶ್ರಮಶಕ್ತಿ ಯೋಜನೆ	14	2.80	19	2.85
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	–	–
7	ಕಿರುಸಾಲ ಯೋಜನೆ	44	2.20	–	–
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	8	1.70	12	1.80
10	ದೇವಾಂಗ	2	0.20	–	–
11	ಮಡಿವಾಳ	8	1.15	–	–
12	ಕುಂಬಾರ	3	0.90	–	–
13	ಕುಂಬಾರ	4	1.00	–	–

14	ಕ್ಷತ್ರಿಯ	–	–	–	–
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	–	–
ಒಟ್ಟು		573	37.97	42	6.16

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ					
16	1) ಅವಧಿ ಸಾಲಗಳು	11	2.97	28	4.00
	2) ನ್ಯೂ–ಸ್ವರ್ಣಿಮಾ ಯೋಜನೆ	40	4.79	–	–
ಒಟ್ಟು		51	7.76	28	4.00
ಒಟ್ಟು ಮೊತ್ತ		624	45.73	70	10.16

ಜಿಲ್ಲೆ: ಮೈಸೂರು ಹುಣಸೂರು ತಾಲ್ಲೂಕು

ಕ್ರ ಸ ಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ ಾ	ಆರ್ಥಿಕ	ಭೌತಿಕ ಾ	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	23	2.53	6	0.58
2	ಸಾಂಪ್ರದಾಯಿಕ ವೃತ್ತಿದಾರರ ಯೋಜನೆ	446	22.30	–	–
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	–	–
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	22	3.45	34	5.10
5	ಶ್ರಮಶಕ್ತಿ ಯೋಜನೆ	14	2.80	14	2.10

6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	10	1.50
7	ಕಿರುಸಾಲ ಯೋಜನೆ	46	2.30	20	1.00
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	8	1.70	10	1.50
10	ದೇವಾಂಗ	2	0.20	–	–
11	ಮಡಿವಾಳ	8	1.15	–	–
12	ಕುಂಬಾರ	4	0.90	–	–
13	ಕುಂಬಾರ	4	1.00	–	–
14	ಕ್ಷತ್ರಿಯ	–	–	–	–
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	–	–
ಒಟ್ಟು		578	38.33	94	11.78

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ					
16	1) ಅವಧಿ ಸಾಲಗಳು	12	2.97	22	3.15
	2) ನ್ಯೂ–ಸ್ವರ್ಣಿಮಾ ಯೋಜನೆ	46	5.53	34	5.10
ಒಟ್ಟು		58	8.50	56	8.25
ಒಟ್ಟು ಮೊತ್ತ		636	46.83	150	20.03

ಜಿಲ್ಲೆ: ಮೈಸೂರು ಹೆಚ್.ಡಿ.ಕೋಟೆ

ತಾಲ್ಲೂಕು

ಕ್ರ ಸ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿ

ಂ		್		್	್ಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	23	2.53	9	1.10
2	ಸಾಂಪ್ರದಾಯಿಕ ವೃತ್ತಿದಾರರ ಯೋಜನೆ	448	22.40	66	3.30
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	–	–
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	23	3.45	25	3.75
5	ಶ್ರಮಶಕ್ತಿ ಯೋಜನೆ	15	3.00	20	3.00
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	–	–
7	ಕಿರುಸಾಲ ಯೋಜನೆ	46	2.30	–	–
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	8	1.65	10	1.50
10	ದೇವಾಂಗ	2	0.20	–	–
11	ಮಡಿವಾಳ	8	1.15	–	–
12	ಕುಂಬಾರ	4	0.95	–	–
13	ಕುಂಬಾರ	4	1.00	–	–
14	ಕ್ಷತ್ರಿಯ	–	–	–	–
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	–	–
ಒಟ್ಟು		5581	38.63	130	12.6

				5

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ				
16	1) ಅವಧಿ ಸಾಲಗಳು	12	2.97	24	5.87
	2) ನ್ಯೂ-ಸ್ವರ್ಣಿಮಾ ಯೋಜನೆ	51	6.14	37	5.55
ಒಟ್ಟು		63	9.11	61	11.42
ಒಟ್ಟು ಮೊತ್ತ		644	47.74	191	24.07

ಜಿಲ್ಲೆ: ಮೈಸೂರು ಹುಣಸೂರು ತಾಲ್ಲೂಕು

ಕ್ರ ಸ ಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ ಂ	ಆರ್ಥಿಕ	ಭೌತಿಕ ಂ	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	23	2.53	8	0.98
2	ಸಾಂಪ್ರದಾಯಿಕ ವೃತ್ತಿದಾರರ ಯೋಜನೆ	446	22.30	–	–
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	1	0.10
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	23	3.45	40	6.00
5	ಶ್ರಮಶಕ್ತಿ ಯೋಜನೆ	14	2.80	–	–
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	59	8.55

7	ಕಿರುಸಾಲ ಯೋಜನೆ	46	2.30	34	1.70
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	8	1.65	–	–
10	ದೇವಾಂಗ	2	0.20	–	–
11	ಮಡಿವಾಳ	7	1.15	15	2.25
12	ಕುಂಬಾರ	4	0.95	16	2.40
13	ಕುಂಬಾರ	4	1.00	23	3.45
14	ಕ್ಷತ್ರಿಯ	–	–	–	–
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	60	9.00
ಒಟ್ಟು		577	38.33	256	34.43

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ					
16	1) ಅವಧಿ ಸಾಲಗಳು	12	2.97	9	1.28
	2) ನ್ಯೂ–ಸ್ವರ್ಣಿಮಾ ಯೋಜನೆ	46	5.53	73	9.95
ಒಟ್ಟು		58	8.50	82	11.23
ಒಟ್ಟು ಮೊತ್ತ		635	46.83	338	45.66

ಜಿಲ್ಲೆ: ಮೈಸೂರು ಮೈಸೂರು ತಾಲ್ಲೂಕು

ಕ್ರ ಸ ಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ ು	ಆರ್ಥಿಕ	ಭೌತಿಕ ು	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ	110	12.10	68	13.6

	ಸಾಫ್ಟ್‌ಲೋನ್				0
2	ಸಾಂಪ್ರದಾಯಿಕ ವೃತ್ತಿದಾರರ ಯೋಜನೆ	2230	111.50	29	1.45
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	–	–
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	110	16.50	117	17.55
5	ಶ್ರಮಶಕ್ತಿ ಯೋಜನೆ	70	14.00	62	9.90
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	82	12.30
7	ಕಿರುಸಾಲ ಯೋಜನೆ	220	11.00	182	9.10
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	7	1.65	55	8.25
10	ದೇವಾಂಗ	2	0.20	–	–
11	ಮಡಿವಾಳ	7	1.15	30	4.50
12	ಕುಂಬಾರ	4	0.95	37	5.55
13	ಕುಂಬಾರ	4	1.00	2	0.30
14	ಕ್ಷತ್ರಿಯ	–	–	2	0.30
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	40	6.00
ಒಟ್ಟು		2764	170.05	706	88.80

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ

16	1) ಅವಧಿ ಸಾಲಗಳು	55	14.85	173	23.86
	2) ನ್ಯೂ-ಸ್ವರ್ಣಿಮಾ ಯೋಜನೆ	200	23.95	216	32.15
ಒಟ್ಟು		255	38.80	389	56.01
ಒಟ್ಟು ಮೊತ್ತ		3019	208.85	1095	144.81

ಜಿಲ್ಲೆ: ಮೈಸೂರು ಟಿ.ನರಸೀಪುರ

ಕ್ರ ಸ ಂ	ಯೋಜನೆಯ ಹೆಸರು	ಗುರಿ		ಸಾಧನೆ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್	23	2.53	17	2.04
2	ಸಾಂಪ್ರದಾಯಿಕ ವೃತ್ತಿದಾರರ ಯೋಜನೆ	446	22.30	–	–
	(ಬ್ಯಾಂಕ್ ಲಿಂಕ್ ಯೋಜನೆ)	–	–	–	–
3	ಅರಿವು ಯೋಜನೆ	–	–	–	–
4	ಭೂರಹಿತ ಕೃಷಿ/ಕೂಲಿ ಕಾರ್ಮಿಕರ ಸಾಲ ಯೋಜನೆ	23	3.45	51	7.65
5	ಶ್ರಮಶಕ್ತಿ ಯೋಜನೆ	14	2.80	19	2.85
6	ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಾಲ ಯೋಜನೆ	–	–	–	–

ಆ-೨೨೪೭-೨

7	ಕಿರುಸಾಲ ಯೋಜನೆ	46	2.30	108	5.40
8	ಭೂ ಖರೀದಿ ಯೋಜನೆ	–	–	–	–
9	ಉಪ್ಪಾರ (ರಾಜ್ಯ)	7	1.65	–	–
10	ದೇವಾಂಗ	2	0.20	–	–
11	ಮಡಿವಾಳ	7	1.10	–	–
12	ಕುಂಬಾರ	4	0.95	–	–
13	ಕುಂಬಾರ	4	1.00	–	–
14	ಕ್ಷತ್ರಿಯ	2	0.50	2	0.50
15	ವಿವಿಧ ಸಮುದಾಯಗಳ ಅಭಿವೃದ್ಧಿ ಯೋಜನೆ	–	–	–	–
ಒಟ್ಟು		578	38.78	197	18.44

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಯೋಜನೆಗಳು ಜಿಲ್ಲೆಗೆ ನಿಗಧಿಪಡಿಸಿದ ಒಟ್ಟು ಗುರಿ					
16	1) ಅವಧಿ ಸಾಲಗಳು	12	2.97	17	2.43
	2) ನ್ಯೂ–ಸ್ವರ್ಣಿಮಾ ಯೋಜನೆ	46	5.53	84	12.60
ಒಟ್ಟು		58	8.50	101	15.03
ಒಟ್ಟು ಮೊತ್ತ		636	47.28	298	33.47

ಅನುಬಂಧ–3

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

ಯೋಜನೆ: ಸ್ವಯಂ ಉದ್ಯೋಗ ಯೋಜನೆ

ಕ್ರ.ಸಂ	ತಾಲ್ಲೂಕು	ಗುರಿ		ಸಾಧನೆ			
					ಆರ್ಥಿಕ (ರೂ.ಲಕ್ಷಗಳಲ್ಲಿ)		
		ಭೌತಿಕ	ಆರ್ಥಿಕ	ಭೌತಿಕ	ಸಹಾಯಧನ	ಬ್ಯಾಂಕ್ ಸಾಲ	ಒಟ್ಟು
1	ಮೈಸೂರು	139	13.90	41	3.90	11.84	15.74
2	ಟಿ.ನರಸೀಪುರ	46	4.60	52	4.00	12.23	16.23
3	ನಂಜನಗೂಡು	43	4.30	21	1.85	6.47	8.32
4	ಹುಣಸೂರು	37	3.70	16	1.25	4.54	5.79
5	ಹೆಚ್.ಡಿ.ಕೋಟೆ	53	5.30	12	1.05	3.08	4.13
6	ಪಿರಿಯಪಟ್ಟಣ	29	2.90	14	1.10	3.37	4.47
7	ಕೆ.ಆರ್.ನಗರ	28	2.80	11	1.05	2.50	3.55
ಒಟ್ಟು		375	37.50	167	14.20	44.03	58.23

ಯೋಜನೆ: ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ)

ಕ್ರ.ಸಂ	ತಾಲ್ಲೂಕು	ಗುರಿ		ಸಾಧನೆ				
					ಆರ್ಥಿಕ (ರೂ.ಲಕ್ಷಗಳಲ್ಲಿ)			
		ಭೌತಿಕ	ಆರ್ಥಿಕ	ಭೌತಿಕ	ಸಹಾಯಧನ	ಬೀಜಧನ	ಬ್ಯಾಂಕ್ ಸಾಲ	ಒಟ್ಟು
1	ಮೈಸೂರು	16	6.90	24	1.70	6.73	23.73	32.16
2	ಟಿ.ನರಸೀಪುರ	06	2.58	0	–	–	–	–

3	ನಂಜನಗೂಡು	05	2.15	1	0.10	0.20	–	0.30
4	ಹುಣಸೂರು	05	2.15	2	–	1.27	0.70	1.97
5	ಹೆಚ್.ಡಿ.ಕೋಟೆ	06	2.58	2	0.10	0.81	3.15	4.06
6	ಪಿರಿಯಪಟ್ಟಣ	05	1.72	1	–	0.28	1.11	1.39
7	ಕೆ.ಆರ್.ನಗರ	05	1.72	0	–	–	–	–
ಒಟ್ಟು		48	19.80	30	1.90	9.29	28.69	39.88

ಅನುಬಂಧ–4

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಸ್ವಯಂ ಉದ್ಯೋಗ ಯೋಜನೆ:–

ಕ್ರ.ಸಂ	ತಾಲ್ಲೂಕು	ಬೌತಿಕ ಗುರಿ	ಆರ್ಥಿಕ ಗುರಿ	ಬೌತಿಕ ಸಾಧನೆ	ಆರ್ಥಿಕ ಸಾಧನೆ		ಬಿಡುಗಡೆಗೆ ಬಾಕಿ ಇರುವ	
					ಸಹಾಯಧನ	ಅಂಚೆ ಹಣ	ಸಂಖ್ಯೆ	ಮೊತ್ತ
1	ಮೈಸೂರು	98	9.80	21	1.75	0	0	0.00
2	ಟಿ.ನರಸೀಪುರ	33	3.30	19	1.60	0	0	0.00
3	ನಂಜನಗೂಡು	36	3.60	4	0.45	0	0	0.00
4	ಹುಣಸೂರು	45	4.50	19	1.65	0	0	0.00
5	ಹೆಚ್.ಡಿ.ಕೋಟೆ	58	5.80	30	2.25	0	0	0.00
6	ಪಿರಿಯಪಟ್ಟಣ	20	2.00	9	0,70	0	0	0.00

7	ಕೆ.ಆರ್.ನಗರ	18	1.80	14	1.15	0	0	0.00
ಒಟ್ಟು		308	30.8	116	9.55	0	0	0.00

ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ:-

ಕ್ರ.ಸಂ	ತಾಲ್ಲೂಕು	ಭೌತಿಕ ಗುರಿ	ಆರ್ಥಿಕ ಗುರಿ	ಭೌತಿಕ ಸಾಧನೆ	ಆರ್ಥಿಕ ಸಧನೆ		ಬಿಡುಗಡೆಗೆ ಬಾಕಿ ಇರುವ	
					ಸಹಾಯಧನ	ಅಂಚೆಹಣ	ಸಂಖ್ಯೆ	ಮೊತ್ತ
2	ಟಿ.ನರಸೀಪುರ	3	1.80	0	0.00	0.00	0	0.00
3	ನಂಜನಗೂಡು	3	1.80	1	0.00	0.65	0	0.00
4	ಹುಣಸೂರು	3	1.80	0	0.00	0.00	0	0.00
5	ಹೆಚ್.ಡಿ.ಕೋಟೆ	4	2.40	0	0.00	0.00	0	0.00
6	ಪಿರಿಯಪಟ್ಟಣ	1	0.60	1	0.30	0.00	0	0.00
7	ಕೆ.ಆರ್.ನಗರ	1	0.60	0	0.00	0.00	0	0.00
ಒಟ್ಟು		23	13.80	4	0.50	1.05	0	0.00

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ವಿಧಾನ ಸಭಾ ಸದಸ್ಯರಾದ ಶ್ರೀ ಮಂಜುನಾಥ.ಹೆಚ್.ಪಿ ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 144ಕ್ಕೆ ಪೂರಕ ಟಿಪ್ಪಣಿ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಹಿಂದುಳಿದ ವರ್ಗಗಳ ಆರ್ಥಿಕಾಭಿವೃದ್ಧಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಅನುಷ್ಠಾನಗೊಳಿಸುತ್ತಿರುವ ವಿವಿಧ ಸಾಲ ವಿವಿಧ ಯೋಜನೆಗಳಲ್ಲಿ 2009–10ರ ಸಾಲಿಗೆ 1,59,642 ಜನರಿಗೆ 149.50ಕೋಟಿರೂ.ಗಳ ಅರ್ಥಿಕ ಸೌಲಭ್ಯ ಒದಗಿಸುವ ಗುರಿಯಿದ್ದು, 63,901 ಜನರಿಗೆ 8891.51ಲಕ್ಷರೂ.ಗಳ ಸೌಲಭ್ಯವನ್ನು ಒದಗಿಸಲಾತಿರುತ್ತದೆ.

ಮೈಸೂರು ಜಿಲ್ಲೆಗೆ 6806 ಜನರಿಗೆ 486.69ಲಕ್ಷರೂ.ಗಳ ಆರ್ಥಿಕ ಸೌಲಭ್ಯ ಒದಗಿಸುವ ಗುರಿ ಹೊಂದಿದ್ದು. 2272 ಜನರಿಗೆ 293.19ಲಕ್ಷರೂ.ಗಳ ಸಾಲ/ಸಹಾಯಧನದ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

ಬ್ಯಾಂಕ್‌ಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಯೋಜನೆಗಳು

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆ ಮತ್ತು ಸಾಂಪ್ರದಾಯಿಕ ವೃತ್ತಿದಾರರಿಗೆ ಆರ್ಥಿಕ ನೆರವು ಒದಗಿಸುವ ಯೋಜನೆಯನ್ನು ಬ್ಯಾಂಕುಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ.

ಚೈತನ್ಯ ಸಬ್ಸಿಡಿ ಕಂ ಸಾಫ್ಟ್‌ಲೋನ್ ಯೋಜನೆಯಲ್ಲಿ ಹಿಂದುಳಿದ ವರ್ಗಗಳ ಜನರು ಕೈಗೊಳ್ಳುವ 1.00ಲಕ್ಷರೂ.ಗಳ ಘಟಕವೆಚ್ಚವಿರುವ ಆರ್ಥಿಕ ಚಟುವಟಿಕೆಗಳಿಗೆ ಬ್ಯಾಂಕ್‌ಗಳ ಸಹಯೋಗದೊಂದಿಗೆ ಸಾಲ ಒದಗಿಸಲಾಗುವುದು. ನಿಗಮದಿಂದ 5000/–ರೂ.ಗಳ ಸಹಾಯಧನ ಹಾಗೂ 25000/–ರೂ.ಗಳ ಮೇಲ್ಪಟ್ಟು ಸಾಲಕ್ಕೆ ಶೇ.20ರಷ್ಟು ಅಂದರೆ ಗರಿಷ್ಟ 20000/–. ರೂ.ಗಳ ಮಾರ್ಜಿನ್ ಹಣವನ್ನು ಶೇ.4ರ ಬಡ್ಡಿದರದಲ್ಲಿ ನಿಗಮದಿಂದ ಮಂಜೂರು ಮಾಡಲಾಗುವುದು. 2009–10ನೇ ಸಾಲಿಗೆ 5000 ಜನರಿಗೆ

550.00ಲಕ್ಷರೂ.ಗಳ ಸಹಾಯಧನ/ಮಾರ್ಜಿನ್ ಹಣ ಸಾಲ ಒದಗಿಸುವ ಗುರಿ ಹೊಂದಿದ್ದು, 3433 ಜನರಿಗೆ 528.25ಲಕ್ಷರೂ.ಗಳ ಸಹಾಯಧನ ಮತ್ತು ಮಾರ್ಜಿನ್ ಹಣವನ್ನು ನಿಗಮದಿಂದ ಮಂಜೂರು ಮಾಡಲಾಗಿದೆ.

ಮೈಸೂರು ಜಿಲ್ಲೆಗೆ ಈ ಯೋಜನೆಗೆ 2009–10ರ ಸಾಲಿಗೆ ಭೌತಿಕ 246 ಆರ್ಥಿಕ 27.06 ಗುರಿ ನಿಗದಿಪಡಿಸಿದ್ದು 121 ಜನರಿಗೆ 20.31 ಲಕ್ಷರೂ.ಗಳ ಸಹಾಯಧನ/ಮಾರ್ಜಿನ್ ಹಣವನ್ನು ಮಂಜೂರು ಮಾಡಲಾಗಿರುತ್ತದೆ.

ಸಾಂಪ್ರದಾಯಿಕ ವೃತ್ತಿದಾರರ ಯೋಜನೆ:– ಈ ಯೋಜನೆ ಹೊಸ ಯೋಜನೆಯಾಗಿದ್ದು. 2009–10ರ ಸಾಲಿನಲ್ಲಿ ಸಾಂಪ್ರದಾಯಿಕ ವೃತ್ತಿದಾರರಾದ ಕಂಬಾರ, ಕಮ್ಮಾರ, ಮಡಿವಾಳ, ಕ್ಷೌರಿಕ ಮುಂತಾದವರಿಗೆ ತಲಾ 5000/–ರೂ.ಗಳ ಸಹಾಯಧನ ಹಾಗೂ 5000/–ರೂ.ಗಳ ಸಾಲವನ್ನು ರೀಜಿನಲ್ ಬ್ಯಾಂಕುಗಳು. ಸಹಕಾರಿ ಬ್ಯಾಂಕ್, ಮತ್ತು ವಾಣಿಜ್ಯ ಬ್ಯಾಂಕ್‌ಗಳ ಮೂಲಕ ಒದಗಿಸಲಾಗುತ್ತಿದೆ. ಈ ಯೋಜನೆಯಲ್ಲಿ 1.00ಲಕ್ಷ ಕುಟುಂಬಗಳಿಗೆ ಆರ್ಥಿಕ ನೆರವು ಒದಗಿಸಲು ಜನರಿಗೆ 50.00ಕೋಟಿರೂ.ಗಳ ಅನುದಾನವನ್ನು ಆಯವ್ಯಯದಲ್ಲಿ ನಿಗದಿಪಡಿಸಲಾಗಿರುತ್ತದೆ. ಪರಿಷ್ಕೃತ ಆಯವ್ಯಯದನ್ವಯ 35.00ಕೋಟಿರೂ.ಗಳ ಕಡಿತಗೊಳಿಸಿ 15.00ಕೋಟಿರೂ.ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಒಟ್ಟು 3001 ಜನರಿಗೆ 150.05 ಲಕ್ಷರೂ.ಗಳ ಸಹಾಯಧನ ಸೌಲಭ್ಯವನ್ನು ಮಂಜೂರು ಮಾಡಲಾಗಿರುತ್ತದೆ. ಮೈಸೂರು ಜಿಲ್ಲೆಯಿಂದ 95 ಜನರಿಗೆ 4.75ರೂ.ಗಳ ಸಹಾಯಧನ ಮಂಜೂರು ಮಾಡಲಾಗಿರುತ್ತದೆ.

ಈ ಎರಡು ಯೋಜನೆಗಳಲ್ಲಿ ಮೈಸೂರು ಜಿಲ್ಲೆಗೆ ನಿಗದಿಪಡಿಸಿದ ಗುರಿ ಸಾಲ ಮತ್ತು ಬ್ಯಾಂಕುಗಳಿಗೆ ಶಿಫಾರಸ್ಸು ಮಾಡಿದ ಅರ್ಜಿಗಳು ಮತ್ತು ಸಾಧಿಸಿದ ತಾಲ್ಲೂಕುವಾರು ವಿವರ ಕೆಳಕಡಂತಿವೆ.

(ಲಕ್ಷ ರೂ.ಗಳಲ್ಲಿ)

ಕ್ರ.ಸಂ	ತಾಲ್ಲೂಕು	ಚೈತನ್ಯ ಯೋಜನೆ					ಸಾಂಪ್ರದಾಯಿಕ ವೃತ್ತಿದಾರರ ಯೋಜನೆ				
		ಬ್ಯಾಂಕಿಗೆ ಶಿಫಾರಸ್ಸಾದ ಅರ್ಜಿಗಳು	ಗುರಿ		ಸಾಧನೆ		ಬ್ಯಾಂಕಿಗೆ ಶಿಫಾರಸ್ಸಾದ ಅರ್ಜಿಗಳು	ಗುರಿ		ಸಾಧನೆ	
			ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	ಹುಣಸೂರು	48	23	2.53	6	0.58	135	446	22.30	–	
2	ಪಿರಿಯಾಪಟ್ಟಣ	12	22	2.42	2	0.50	42	446	22.30	–	
3	ಕೆ.ಆರ್.ನಗರ	41	22	2.42	11	1.51	272	446	22.30	–	
4	ಹೆಚ್.ಡಿ.ಕೋಟೆ	28	23	2.53	9	1.10	203	448	22.40	66	3.30
5	ನಂಜನಗೂಡು	55	23	2.53	8	0,98	43	446	22.30	–	
6	ಟಿ.ನರಸೀಪುರ	27	23	2.53	17	2.04	249	446	22.30	–	
7	ಮೈಸೂರು	133	110	12.10	68	13.60	689	2230	111.50	29	1.45
ಒಟ್ಟು		344	246	27.06	121	20.31	1663	4908	245.40	95	4.75

ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ದಿ ನಿಗಮ ನಿಯಮಿತ, ಬೆಂಗಳೂರು.

ಪೂರಕ ಟಿಪ್ಪಣಿ

ಪರಿಶಿಷ್ಟ ಜಾತಿಯ ನಿರುದ್ಯೋಗಿಗಳು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ಸ್ವಯಂ ಉದ್ಯೋಗ ಯೋಜನೆಯಡಿ ಈ ಕೆಳಕಂಡಂತೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

ಅ) ರೂ.50,000/–ದವರೆಗಿನ ಘಟಕ ವೆಚ್ಚಕ್ಕೆ ನಿಗಮದಿಂದ ಗರಿಷ್ಠ ರೂ.10,000/–ಗಳ ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು.

ಆ) ರೂ.50,000/– ದಿಂದ ರೂ.1,00,000/–ದೋಳಗಿನ ಘಟಕ ವೆಚ್ಚಕ್ಕೆ ನಿಗಮದಿಂದ ಗರಿಷ್ಠ ರೂ.10,000/–ಗಳ ಸಹಾಯಧನ ಹಾಗೂ ಉಳಿದ ಮೊತ್ತವನ್ನು ಬ್ಯಾಂಕುಗಳ ಮುಖಾಂತರ ಸಾಲದ ರೂಪದಲ್ಲಿ ಒದಗಿಸಲಾಗುವುದು.

ಇ) ರೂ.1,00,000/– ದಿಂದ ಮೇಲ್ಪಟ್ಟ ಘಟಕ ವೆಚ್ಚದ ಯೋಜನೆಗಳಿಗೆ ನಿಗಮದಿಂದ ಶೇ.20 ಭಾಗ ಅಂಚಿನ ಹಣ (ಗರಿಷ್ಠ ರೂ.1.00ಲಕ್ಷ) ಶೇ.5 ಭಾಗ ಫಲಾನುಭವಿಯ ಪಾಲು ಹಾಗೂ ಉಳಿದ ಶೇ.75 ಭಾಗ ಬ್ಯಾಂಕ್/ಹಣಕಾಸು ಸಂಸ್ಥೆಗಳ ಸಾಲದ ರೂಪದಲ್ಲಿರುತ್ತದೆ.

2009–10ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಸ್ವಯಂ ಉದ್ಯೋಗ ಯೋಜನೆಗೆ ರೂ.2000.00ಲಕ್ಷ ಹಣ ನಿಗದಿಪಡಿಸಿದ್ದು, ರೂ.1000.00ಲಕ್ಷ ಹಣ ಮಾತ್ರ ಬಿಡುಗಡೆಯಾಗಿದೆ. (ಸ್ವಯಂ ಉದ್ಯೋಗ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಸ್ವಯಂ ಉದ್ಯೋಗ, ಐ.ಎಸ್.ಬಿ. ಹಾಗೂ ಭೂ ಒಡೆತನ ಕಾರ್ಯಕ್ರಮಗಳೂ ಸೇರಿಸಿರುವುದರಿಂದ ನಿಗದಿಪಡಿಸಿದ ಹಣದಲ್ಲಿ ಭೂ ಒಡೆತನ ಯೋಜನೆಗೆ ಸಹಾಯಧನ ನಿಗದಿಪಡಿಸಿಕೊಳ್ಳಲಾಗುತ್ತಿದೆ) ಇದರಲ್ಲಿ ರೂ. 700.00 ಲಕ್ಷವನ್ನು ಸ್ವಯಂ ಉದ್ಯೋಗ ಯೋಜನೆಗೆ ಹಾಗೂ ರೂ.300.00 ಲಕ್ಷ ಭೂ ಒಡೆತನ ಯೋಜನೆಗೆ ನಿಗದಿಪಡಿಸಿಕೊಳ್ಳಲಾಗಿದೆ. ಸ್ವಯಂ ಉದ್ಯೋಗ ಮತ್ತು ಐ.ಎಸ್.ಬಿ.

ಯೋಜನೆ ಸೇರಿ 7860 ಗುರಿ ನಿಗದಿಪಡಿಸಿಕೊಂಡಿದ್ದು, 6956 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

2009–10ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿಪಡಿಸಿದ ಹಣ ಪೂರ್ಣವಾಗಿ ಬಿಡುಗಡೆಯಾಗದಿರುವುದರಿಂದ ಗುರಿಯಂತೆ ಸಹಾಯಧನ ಮಂಜೂರು ಮಾಡಿರುವುದಿಲ್ಲ.

ಬ್ಯಾಂಕ್ ಸಾಲ ಮಂಜೂರಾತಿ ನೀಡದೇ ಇರುವಂತಹ ಪ್ರಕರಣಗಳು ಕಂಡುಬಂದಲ್ಲಿ ಸದರಿ ವಿಷಯವನ್ನು ತಾಲ್ಲೂಕು ಮಟ್ಟದ, ಜಿಲ್ಲಾಮಟ್ಟದ ಹಾಗೂ ರಾಜ್ಯಮಟ್ಟದ ಬ್ಯಾಂಕರ್ಸ್‌ಗಳ ಸಮಿತಿ ಸಭೆಯಲ್ಲಿ ಚರ್ಚಿಸಿ ಸಾಲ ಮಂಜೂರು ಮಾಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೈಸೂರು ಜಿಲ್ಲೆಗೆ ಸ್ವಯಂ ಉದ್ಯೋಗ ಯೋಜನೆಯಡಿ 167 ಫಲಾನುಭವಿಗಳಿಗೆ ಸೌಲಭ್ಯವನ್ನು ಕಲ್ಪಿಸಿದ್ದು, ಸಹಾಯಧನ ಬಾಬ್ತು ರೂ.14.20ಲಕ್ಷ ಸೇರಿ ಬ್ಯಾಂಕ್ ಸಾಲದೊಂದಿಗೆ ಒಟ್ಟರೆ ರೂ.58.23ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಹಾಗೆಯೇ ಐ.ಎಸ್.ಬಿ. ಯೋಜನೆಯಡಿ 30 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ರೂ.1.90ಲಕ್ಷ ಸಹಾಯಧನ, ರೂ.9.29ಲಕ್ಷ ಅಂಚಿನ ಹಣ ಸೇರಿ ಬ್ಯಾಂಕ್ ಸಾಲದೊಂದಿಗೆ ಒಟ್ಟಾರೆ ರೂ.39.88ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀ ಹೆಚ್ ಪಿ ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಕೊಟ್ಟಿರುವ ಉತ್ತರ ಅಪೂರ್ಣವಾಗಿದೆ. ಮುಖ್ಯವಾದ ಸಮಸ್ಯೆ ಏನೆಂದರೆ ಈ ಮೂರು ನಿಗಮಗಳೇನಿದೆ. ಅದರಿಂದ ಗ್ರಾಮಂತರ ಪ್ರದೇಶದಲ್ಲಿರುವ ಯುವಕರಿಗೆ, ವಿದ್ಯಾವಂತ ಯುವಕರಿಗೆ ಸರ್ಕಾರ ಕೆಲವೊಂದ ಸ್ಕೀಮ್‌ಗಳನ್ನು. ಹಾಕಿಕೊಂಡಿದೆ. ಇವರೇ ಕೊಟ್ಟಿರುವ ಉತ್ತರದಲ್ಲಿ ಎಲ್ಲಾ ಸ್ಕೀಮ್‌ನಲ್ಲೂ ಕೇವಲ 20 ಪ್ರಗತಿ ಇದೆ. ಕೆಲವೊಂದು ವಿಚಾರದಲ್ಲಿ ಪ್ರಗತಿ ಶೂನ್ಯ. ಯಾವುದೇ ಪ್ರಗತಿ ಆಗಿಲ್ಲ. ಇದರಿಂದ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದು ಕಾಣಿಸುತ್ತದೆ.

ಸಚಿವರಾಗಲಿ, ಸರ್ಕಾರವಾಗಲಿ ಇದರ ಬಗ್ಗೆ ಯಾವ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಾರೆ? ಕಳೆದ ವರ್ಷವಾಗಲಿ, ಈ ವರ್ಷವಾಗಲಿ ಏನೂ ಆಗಿಲ್ಲ. ಈ ವರ್ಷ ಒಂದು ಸ್ಕೀಮ್‌ನಲ್ಲಂತೂ. . . .

ಅಧ್ಯಕ್ಷರು:– ಪ್ರಶ್ನೆ ಕೇಳಿ.

ಶ್ರೀ ಹೆಚ್ ಪಿ ಮಂಜುನಾಥ್: ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಸಾಂಪ್ರದಾಯಿಕ ವಸತಿ ಯೋಜನೆ ವಿಚಾರದಲ್ಲಂತೂ. . . .

ಅಧ್ಯಕ್ಷರು: ಸಚಿವರು ಕೊಟ್ಟಿರುವ ಉತ್ತರದಲ್ಲಿ clarifications ಏನಾದರೂ ಬೇಕಾಗಿದ್ದರೆ, ಅದನ್ನು ಕೇಳಿ.

ಶ್ರೀ ಹೆಚ್ ಪಿ ಮಂಜುನಾಥ್: ಸಣ್ಣ ಸಣ್ಣ ಜಾತಿಗಳವರಾಗಿದ್ದು, ಅವರದೇ ಆದಂತಹ ವೃತ್ತಿಯನ್ನು ಮಾಡಿಕೊಂಡು ಬಂದಿರುವವರಿಗೆ ಕಳೆದ ಎರಡು ವರ್ಷಗಳಿಂದ ಇಡೀ ರಾಜ್ಯದಲ್ಲಿ ಒಬ್ಬನೇ ಒಬ್ಬನಿಗೂ ಕೂಡ ಒಂದು ರೂಪಾಯಿಯಾಗಲಿ ಕೊಟ್ಟಿಲ್ಲ. ಇಲಾಖೆ ಏನು ಮಾಡುತ್ತಿದೆ? ಎಂಬುದು ನಮ್ಮ ಪ್ರಶ್ನೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಉತ್ತರ ಹೇಳಿ.

ಶ್ರೀ ಡಿ ಸುಧಾಕರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಳೆದ ವರ್ಷದ ಗುರಿಯಲ್ಲಿ ಶೇಕಡ 35ರಷ್ಟು ಪ್ರಗತಿ ಸಾಧಿಸಿದ್ದೇವೆ. ಕಳೆದ ವರ್ಷ ಬ್ಯಾಂಕುಗಳ ಅಸಹಕಾರದಿಂದ ಲಿಂಕ್ ಕಲ್ಪಿಸುವಲ್ಲಿ ಸ್ವಲ್ಪ ತೊಂದರೆಯಾಗಿದೆ. ಈ ವರ್ಷದಲ್ಲಿ ಕಳೆದ ವರ್ಷದ ಬಜೆಟ್‌ನ್ನೂ ಸಹ ಮುಂದುವರೆಸಿ ಈ ವರ್ಷ ಪೂರ್ತಿ ಮಾಡಿಕೊಡುತ್ತೇವೆಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಹೆಚ್ ಪಿ ಮಂಜುನಾಥ್: ಬ್ಯಾಂಕ್‌ಗಳಿಂದ ಸಬ್ಸಿಡಿ ರಿಲೀಸ್ ಆಗುತ್ತಿಲ್ಲವೆಂದು ಹೇಳುತ್ತಾರೆ. ನಮ್ಮ ಸರ್ಕಾರ ಬಜೆಟ್‌ನಲ್ಲಿ ಇಷ್ಟು ಹಣ ಎಂದು ತೋರಿಸುತ್ತಿದೆ. ಕಳೆದ ಎರಡು ವರ್ಷಗಳಿಂದ ಸಬ್ಸಿಡಿಯಾಗಿ ಒಂದು ರೂಪಾಯಿಯನ್ನೂ ಸಹ ಕೊಟ್ಟಿಲ್ಲ. ಹುಣಸೂರು, ಚಾಮರಾಜನಗರ ಮುಂತಾದ ಕಡೆಗಳಲ್ಲಿ ಒಬ್ಬನೇ ಒಬ್ಬ ವ್ಯಕ್ತಿಗೂ ಸಹ ಕೊಟ್ಟಿಲ್ಲ.

ಅಧ್ಯಕ್ಷರು: ಆ ಬಗ್ಗೆ ಆಗಲೇ ಮಾನ್ಯ ಸಚಿವರು 'ಕಳೆದ ವರ್ಷ ಸ್ವಲ್ಪ ಕುಂಠಿತವಾಗಿದೆ. ಈ ವರ್ಷ ಸರಿ ಮಾಡುತ್ತೇವೆ' ಎಂದು ಹೇಳಿದ್ದಾರೆ.

ಶ್ರೀ ಹೆಚ್ ಪಿ ಮಂಜುನಾಥ್: ಎರಡು ವರ್ಷಗಳಿಂದ ಅದೇ repeat ಆಗುತ್ತಿದೆ. ಹೋದ ವರ್ಷಕ್ಕಿಂತ ಪ್ರಗತಿ ಈ ವರ್ಷ ಇನ್ನೂ ಕಡಿಮೆಯಾಗಿದೆ.

ಶ್ರೀ ವೈ ಎನ್ ರುದ್ರೇಶ್‌ಗೌಡ: ಮಾನ್ಯ ಅಧ್ಯಕ್ಷರೆ, ಶೇಕಡ 35ರಷ್ಟು ಗುರಿಯನ್ನೂ ಸಹ ಸಾಧಿಸಿಲ್ಲ. ಸುಮ್ಮನೆ ಆ ರೀತಿ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆಯೇ ಹೊರತು, ಯಾವ ಗುರಿಯನ್ನೂ ಸಹ ಸಾಧಿಸಿಲ್ಲ. 2009–10ರದ್ದು ಏನೂ ಪ್ರಗತಿಯನ್ನೇ ಸಾಧಿಸಿಲ್ಲ. ಅದು ಇನ್ನೂ ಶುರುವಾಗಿಲ್ಲ. ಗಂಗಾ ಕಲ್ಯಾಣದಲ್ಲಿ ಒಂದು ಬೋರ್‌ವೆಲ್ ಅನ್ನೂ ಸಹ ಕೊರೆದಿಲ್ಲ, ಏನನ್ನೂ ಮಾಡಿಲ್ಲ...

ಅಧ್ಯಕ್ಷರು: ಬೇಡಿಕೆಗಳ ಮೇಲೆ ಚರ್ಚಿಸುವಾಗ ಈ ಎಲ್ಲಾ ಆಂಶಗಳನ್ನು ಹೇಳಿ. ಎಲ್ಲದಕ್ಕೂ ಮಧ್ಯೆ ಎದ್ದು ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಹೆಚ್ ಪಿ ಮಂಜುನಾಥ್: ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದಿದ್ದೀರಿ, ಅದರ ಬಗ್ಗೆಯಾದರೂ ಹೇಳಿ ,

ಅಧ್ಯಕ್ಷರು: ಮಾನ್ಯ ಸಚಿವರು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಿ.

ಶ್ರೀ ಹೆಚ್ ಪಿ ಮಂಜುನಾಥ್: ನಾವು ಜನಗಳಿಗೆ ಹೋಗಿ ಉತ್ತರ ಕೊಡಬೇಕು. ಈಗಾಗಲೇ ನಮ್ಮನ್ನು ಅಲ್ಲಿ ಅಧ್ಯಕ್ಷರನ್ನಾಗಿ ಮಾಡಿ, ನಮಗೆ ಆಯ್ಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ನಾವು ಆಯ್ಕೆ ಮಾಡಿದ್ದೇವೆ. ಈಗ ಜನಗಳು ನಮ್ಮನ್ನು ಕೇಳುತ್ತಿದ್ದಾರೆ.

ಶ್ರೀ ಡಿ ಸುಧಾಕರ್: ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಿಳಿಸಿದ ಹಾಗೆ, ಈ ಒಂದು ಸಾಲವನ್ನು ಬ್ಯಾಂಕಿಗೆ ಲಿಂಕ್ ಮಾಡಲಿಕ್ಕೆ ಬ್ಯಾಂಕುಗಳು ಸಹಕಾರ ಕೊಡದಿರುವಂತಹ ಪರಿಸ್ಥಿತಿ ಬಂದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಸಹಾಯಧನದ ಕೊರತೆ ಇಲ್ಲ. ಸಹಾಯಧನವನ್ನು ಪೂರ್ತಿ ಬಿಡುಗಡೆ ಮಾಡಲಿಕ್ಕೆ ಕ್ರಮ ತೆಗೆದುಕೊಂಡೆದ್ದೇವೆ. ಅದೇ ರೀತಿ ಈಗಾಗಲೇ ರಾಜ್ಯ ಮಟ್ಟದಲ್ಲಿ 2–3 ಸಲ ಬ್ಯಾಂಕರುಗಳ ಜೊತೆಗೆ ಚರ್ಚೆ ಮಾಡಿದ್ದೇವೆ.

ಬ್ಯಾಂಕ್‌ಗಳು ಈ ರೀತಿ ನಮಗೆ ಸಹಕಾರ ಕೊಡುತ್ತಿಲ್ಲವೆಂದು ನಾವು Reserve Bankಗೂ ಸಹ ಪತ್ರ ಬರೆದಿದ್ದೇವೆ. ಅವರೂ ಸಹ ಸಹಕಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಖಂಡಿತವಾಗಿಯೂ ಕಳೆದ ವರ್ಷದ ಗುರಿ ಏನಿದೆ, ಈ ವರ್ಷದ ಗುರಿಯ ಜೊತೆಗೆ ಅದನ್ನೂ ಪೂರ್ಣವಾಗಿ ಈ ವರ್ಷದಲ್ಲಿ ಮುಗಿಸುತ್ತೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಮಾಲೀಕಯ್ಯ ವಿ.ಗುತ್ತೇದಾರ್ ಅವರ ಪರವಾಗಿ ಮಾನ್ಯ ಜಯಚಂದ್ರರವರು ಕೇಳಬೇಕು.

ಶ್ರೀ ಟಿ ಬಿ ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳುವುದಕ್ಕೆ ಮುಂಚಿತವಾಗಿ ಮಾನ್ಯ ಮಂಜುನಾಥ್‌ರವರ ಪ್ರಶ್ನೆಗೆ ಪೂರಕ ಪ್ರಶ್ನೆಯೊಂದನ್ನು ಕೇಳಬಯಸುತ್ತೇನೆ.

ಅಧ್ಯಕ್ಷರು:– Demands ಮೇಲೆ ಚರ್ಚಿಸುವಾಗ ನೀವು ಎಲ್ಲವನ್ನೂ ಹೇಳಿ.

ಶ್ರೀ.ಟಿ ಬಿ ಜಯಚಂದ್ರ:– Demandsನಲ್ಲಿ ಹೇಳುವಂತಹ ವಿಷಯ ಇದಲ್ಲ.

ಅಧ್ಯಕ್ಷರು:– No, I will not allow. Demand ಮೇಲೆ ಚರ್ಚೆ ಮಾಡುವಾಗ ಇದನ್ನೆಲ್ಲಾ ಹೇಳಿ.

ಶ್ರೀ ಟಿ ಬಿ ಜಯಚಂದ್ರ: 2009–10ಕ್ಕೆ ನೀವು ಕೊಟ್ಟಿರುವಂತಹ target ಏನು? ಮತ್ತು achievement ಏನು? ಏಕೆ ಈ ರೀತಿಯಾಗಿದೆ? ನೀವು ಕೇವಲ ಸಬ್ಸಿಡಿ ರಿಲೀಸ್ ಮಾಡಿದ್ದೀರೆಂದರೆ ಹೇಗೆ ಸಾಲಕ್ಕೋಸ್ಕರ ಬ್ಯಾಂಕುಗಳಿಗೆ ಅಲೆದೂ ಅಲೆದೂ ನಮ್ಮ ಮನೆ ಹಾಳಾಗಿ ಹೋಗಿದೆ ಎಂದು ಫಲಾನುಭವಿಗಳು ಹೇಳಿದ್ದರಿಂದ ಮಾನ್ಯ ಸದಸ್ಯರು ಈ ಪ್ರಶ್ನೆ ಕೇಳಿದ್ದಾರೆ. ಇದು ಕೇವಲ ಒಂದು ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಈ ರೀತಿ ನಿಮ್ಮ ಜಿಲ್ಲೆಯಲ್ಲೂ ಆಗಿದೆ. ಇಡೀ ರಾಜ್ಯದಲ್ಲೆಲ್ಲಾ ಆಗಿದೆ. ದಯಮಾಡಿ ಇದನ್ನು ಜಾರಿಗೆ ತನ್ನಿ. ನಿಮ್ಮ ಗುರಿ ಎಷ್ಟಿದೆಯೋ, ಅಷ್ಟಕ್ಕೆ ಸೀಮಿತವಾಗಿ ಫಲಾನುಭವಿಗಳ ಆಯ್ಕೆ ಮಾಡಿ. ನೀವು 100 ಜನರಿಗೆ ಕೊಡುತ್ತೇವೆಂದು ಹೇಳಿ ಕೇವಲ 20 ಜನರಿಗೆ ಮಾತ್ರ ಕೊಟ್ಟರೆ

ಶಾಸಕರ ಕಥೆ ಏನಾಗಬೇಕು? ಒಬ್ಬರಿಗೂ ನೀವೂ ಸಾಲ ಕೊಟ್ಟಿಲ್ಲ. ನಾನಂತೂ ನಿಮ್ಮನ್ನು ನಂಬಿ ಕಾಗದ ಬರೆದಿದ್ದೆ. ಆದರೆ ಈಗ ಜನ ಕೇಳುತ್ತಾರೆಂದು ಅವರಿಂದ ತಪ್ಪಿಸಿಕೊಂಡು ಹೋಗುವಂತಹ ಪರಿಸ್ಥಿತಿ ಉಂಟಾಗಿದೆ.

ಶ್ರೀ ಡಿ ಸುಧಾಕರ್: ಸನ್ಮಾನ್ಯ ಅಧ್ಯಕ್ಷರೆ, ಈ ಯೋಜನೆ ಬಹಳ ಅಲ್ಪ ಮೊತ್ತದ್ದಾಗಿರುವುದರಿಂದ, 5 ಸಾವಿರ ಸಬ್ಸಿಡಿ, 5 ಸಾವಿರ ಲೋನ್ ಇರುವುದರಿಂದ, ಬ್ಯಾಂಕ್‌ನವರು ಇದು feasible ಆಗುವುದಿಲ್ಲ ಎಂಬ ಕಾರಣದಿಂದ ಸ್ವಲ್ಪ ಸಹಕಾರವನ್ನು ಕೊಡುತ್ತಿಲ್ಲ. ಈಗಾಗಲೇ ಈ ಬಗ್ಗೆ ಅವರ ಜೊತೆಗೆ ಮಾಡಿದ್ದೇವೆ. ಆಕಸ್ಮಾತ್ ಅವರು ಸಹಕಾರ ಕೊಡದಿದ್ದರೂ ಸಹ ನಮ್ಮ corporation ವತಿಯಿಂದಲೇ ತೆಗೆದುಕೊಳ್ಳಲಿಕ್ಕೆ ನಾನು ಕ್ರಮ ತೆಗೆದುಕೊಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಈ ಸಹಕಾರಿ ಬ್ಯಾಂಕುಗಳು . . .

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ ನಾನು ನಿಮಗೆ allow ಮಾಡುವುದಿಲ್ಲ. ನಾನು ಈಗಾಗಲೇ ಮಾಲೀಕಯ್ಯ ವಿ.ಗುತ್ತೇದಾರ್‌ರವರ ಪರವಾಗಿ ಮುಂದಿನ ಪ್ರಶ್ನೆ ಕೇಳಲು ಮಾನ್ಯ ಜಯಚಂದ್ರರವರನ್ನು ಕರೆದಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಜಯಚಂದ್ರವರೇ, ತಾವು ದಯವಿಟ್ಟು ಪ್ರಶ್ನೆ ಕೇಳಿ. ಮಾನ್ಯ ಪ್ರಕಾಶ್ ಹುಕ್ಕೇರಿಯವರೆ, ನೀವು ಬೇಡಿಕೆ ಮೇಲೆ ಇದನ್ನೆಲ್ಲಾ ಮಾಡಿ. ಸುಮ್ಮನೆ ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ನೀವು ಈ ರೀತಿ ಮಾಡಿದರೆ ನಾನು ಯಾವುದೂ ಸಹ ದಾಖಲೆಗೆ ಹೋಗಬಾರದು ಎಂದು ಹೇಳಬೇಕಾಗುತ್ತದೆ.

ರಾಜ್ಯದ ಪಡಿತರ ಪದಾರ್ಥಗಳು ಬೇರೆ ರಾಜ್ಯಗಳಿಗೆ ರವಾನೆಯಾಗುತ್ತಿರುವ ಬಗ್ಗೆ

47(394) ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:(ಅಫ್ಜಲ್‌ಪುರ್) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?